
# ಮೈಸೂರು ಆಶ್ರಮದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮಗಳು








**‘ವಿವೇಕ ಶಿಕ್ಷಣ’ದ ವಾರ್ಷಿಕೋತ್ಸವ :** ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಕಳೆದ ೧೯ ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳಿಗಾಗಿ ವಿಶೇಷ ನೆರವಿನ ಉಚಿತ ಶಿಕ್ಷಣ ಕಾರ್ಯಕ್ರಮ **‘ವಿವೇಕ ಶಿಕ್ಷಣ’**ದ ವಾರ್ಷಿಕೋತ್ಸವವು ೨೦೧೯ರ ಜನವರಿ ೫ ರಂದು ನೆರವೇರಿತು. ಮುಖ್ಯ ಅತಿಥಿಗಳಾಗಿ ಮೈಸೂರು ಎರಿಸ್‌ಗ್ಲೋಬಲ್ ಸಂಸ್ಥೆಯ ಶ್ರೀ ಕೆ.ಜಿ. ರಾಘವೇಂದ್ರ ಅವರು ಭಾಗವಹಿಸಿ ಮಾತನಾಡಿದರು. ಮೈಸೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮಜ್ಞಾನಂದಜಿ ಆಶೀರ್ವಚನ ನೀಡಿದರು. ‘ವಿವೇಕ ಶಿಕ್ಷಣ’ದ ಸಂಚಾಲಕರಾದ ಸ್ವಾಮಿ ಸರ್ವಜಯಾನಂದಜಿ ಉಪಸ್ಥಿತರಿದ್ದರು. ಕೊನೆಯದಾಗಿ ‘ವಿವೇಕ ಶಿಕ್ಷಣ’ದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಇಡೀ ಕಾರ್ಯಕ್ರಮವನ್ನು ವಿದ್ಯಾರ್ಥಿಗಳೇ ಅಚ್ಚುಕಟ್ಟಾಗಿ ನಿರೂಪಿಸಿದ್ದು ವಿಶೇಷವಾಗಿ ಗಮನ ಸೆಳೆಯಿತು.



**ರಾಷ್ಟ್ರೀಯ ಯುವ ದಿನಾಚರಣೆ :** ಜನವರಿ ೧೨ರಂದು ಸ್ವಾಮಿ ವಿವೇಕಾನಂದರ ಜನ್ಮದಿನ ಪ್ರಯುಕ್ತ **‘ರಾಷ್ಟ್ರೀಯ ಯುವ ದಿನಾಚರಣೆ’** ಯನ್ನು ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಮೆರವಣಿಗೆಯೊಂದಿಗೆ ಆಚರಿಸಿತು. ನಗರದ ೧೨ ಶಾಲೆ, ಕಾಲೇಜುಗಳಿಂದ ಬಂದ ಸುಮಾರು ೧೩೦೦ ಮಂದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸ್ವಾಮೀಜಿ ಭಾವಚಿತ್ರಕ್ಕೆ ಆಶ್ರಮದ ಸ್ವಾಮೀಜಿಗಳು, ಭಕ್ತರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಮಾಡಿದ ಬಳಿಕ ಮೆರವಣಿಗೆ ಆರಂಭಗೊಂಡಿತು. ವಿದ್ಯಾರ್ಥಿಗಳು ವಾದ್ಯಘೋಷ, ಸ್ವಾಮೀಜಿ ಸಂದೇಶದ ಫಲಕಗಳೊಂದಿಗೆ ೩ ಕಿ.ಮೀ. ದೂರ ನಡೆದು, ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಆಯೋಜಿಸಿದ ಸಭಾಕಾರ್ಯಕ್ರಮಕ್ಕೆ ಬಂದು ಸೇರಿದರು. ಎಲ್ಲರಿಗೂ ಪಾನೀಯ ಹಾಗೂ ಪ್ರಸಾದ ನೀಡಲಾಯಿತು.



**ವಿವೇಕ ಸಿಂಚನ :** ಯುವಕರಿಗಾಗಿ ಮೂರು ದಿನಗಳ ಆವಾಸಿ ಶಿಬಿರವು ಜನವರಿ ೧೮ರಿಂದ ೨೦ರ ವರೆಗೆ ಮೈಸೂರು ಆಶ್ರಮದ ಅಂಗಸಂಸ್ಥೆಯಾದ RIMSE ಯಲ್ಲಿ ನಡೆಯಿತು. ಇದರಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಿಂದ ಬಂದ ೧೮ರಿಂದ ೨೮ರ ವರೆಗಿನ ವಯೋಮಿತಿಯ ೧೧೦ ಮಂದಿ ಯುವಕರು ಭಾಗವಹಿಸಿದ್ದರು. ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರನ್ನು ಕುರಿತಂತೆ ಹಾಗೂ ರಾಮಕೃಷ್ಣ ಮಹಾಸಂಘದ ಧ್ಯೇಯಾದರ್ಶ, ಸಂನ್ಯಾಸಿ ಜೀವನದ ಆದರ್ಶ ಮುಂತಾದ ವಿಷಯಗಳನ್ನು ಕುರಿತಂತೆ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳು ಪ್ರವಚನ ನೀಡಿದರು. ಶಿಬಿರಾರ್ಥಿಗಳಿಗೆ ಆಧ್ಯಾತ್ಮಿಕ ಗ್ರಂಥಗಳನ್ನು ನೀಡಲಾಯಿತು.

**ಶಾರದಾ ಜ್ಞಾನಸುಧಾ :** ಸ್ವಾಮಿ ವಿವೇಕಾನಂದರ ಚಿಕಾಗೋ ಉಪನ್ಯಾಸಗಳ ೧೨೫ನೇ ವಾರ್ಷಿಕೋತ್ಸವದ ಆಚರಣೆಯ ಅಂಗವಾಗಿ ಆಶ್ರಮವು ಲಿಖಿತ ರಸಪ್ರಶ್ನೆ ಕಾರ್ಯಕ್ರಮ **‘ಶಾರದಾ ಜ್ಞಾನಸುಧಾ’** ವನ್ನು ಆಚರಿಸಿತು. ‘ಚಿಕಾಗೋದಲ್ಲಿ ವಿಜಯ ಪತಾಕೆ’ ಎಂಬ ಪುಸ್ತಕವನ್ನು ಆಧರಿಸಿ ನಡೆಸಿದ ಈ ರಸಪ್ರಶ್ನೆಯಲ್ಲಿ ೪೫೨ ಶಾಲೆಗಳ ೪೪,೨೧೬ ವಿದ್ಯಾರ್ಥಿಗಳು ಭಾಗವಹಿಸಿದ್ದರು. ೨೦೧೮ರ ಡಿಸೆಂಬರ್ ೩೧ರಂದು ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಸ್ವಾಮಿ ವಿವೇಕಾನಂದರ ಪುಸ್ತಕವನ್ನು ಓದಿ, ಪ್ರಶ್ನೆಗಳಿಗೆ ಉತ್ತರ ಬರೆದು ರಸಪ್ರಶ್ನೆಯಲ್ಲಿ ಭಾಗವಹಿಸಿದ್ದರು. ಈ ಮೂಲಕ ಸ್ವಾಮೀಜಿ ಸಂದೇಶಗಳು ಇನ್ನಷ್ಟು ವ್ಯಾಪಕವಾಗಿ ಹರಡುವುದು ಸಾಧ್ಯವಾಯಿತು.



Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020